ಲೋಕಧ್ವನಿ

# ಶಾಂತಲಾ ಪವರ್ ಜತೆ ಒಡಂಬಡಿಕೆ

ಶಿರಸಿ: ಕೈಗಾರಿಕಾ ಕ್ಷೇತ್ರದ ಅಗತ್ಯತೆಯನ್ನು ಅರಿತು ವಿದ್ಯಾರ್ಥಿಗಳಿಗೆ ಈ ನಿಟ್ಟಿನಲ್ಲಿ ತರಬೇತಿ ನೀಡುವ ಕುರಿತು ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗವು ಹುಬ್ಬಳ್ಳಿಯ ಶಾಂತಲಾ ಪವರ್ ಲಿಮಿಟೆಡ್ ಜತೆ ಒಡಂಬಡಿಕೆ ಮಾಡಿಕೊಂಡಿದೆ.



ಶಾಂತಲಾ ಪವರ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ ಡಾ. ಸುಮಂಗಲಾ ಕೆ ಮೈಸೂರ್ ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿ.ಎ ಕುಲಕರ್ಣಿ ಒಡಂಬಡಿಕೆಗೆ ಸಹಿ ಮಾಡಿದರು. ಈ ಒಡಂಬಡಿಕೆಯು ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನದ ಉನ್ನತೀಕರಣ ಮತ್ತು ಯೋಜನಾ ಕಾರ್ಯಕ್ಕೆ ಸಹಾಯಕವಾಗುವುದು ಎಂದು ವಿಭಾಗ ಮುಖ್ಯಸ್ಥ ಪ್ರೊ. ಅಲ್ಲಮಪ್ರಭು ಕೊಳಕಿ ಹೇಳಿದರು. ಈ ಸಂದರ್ಭದಲ್ಲಿ ಶಾಂತಲಾ ಪವರ್‌ನ ತರಬೇತಿ ವಿಭಾಗದ ವ್ಯವಸ್ಥಾಪಕ ವಿನೋದ್ ನಾರಾಯಣ ಇದ್ದರು.

Main Edition
Nov 8, 2023 Page No. 5
Powered by : eReleGo.com

# ಶಾಂತಲಾ ಪವರ್ ಜೊತೆ ವಿಡಿಐಟಿ ಒಡಂಬಡಿಕೆ

ನುಡಿಜೇನು ವರದಿ

**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗವು ಹುಬ್ಬಳ್ಳಿಯ ಶಾಂತಲಾ ಪವರ್ ಲಿಮಿಟೆಡ್ ಜೊತೆ ಒಡಂಬಡಿಕೆ ಮಾಡಿಕೊಂಡಿದೆ.




ಶಾಂತಲಾ ಪವರ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ ಡಾ.ಸುಮಂಗಲ ಕೆ.ಮೈಸೂರ್ ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಒಡಂಬಡಿಕೆಗೆ ಸಹಿ ಮಾಡಿದರು. ಕೈಗಾರಿಕಾ ಕ್ಷೇತ್ರದ ಅಗತ್ಯತೆಯನ್ನು ಅರಿತು ವಿದ್ಯಾರ್ಥಿಗಳಿಗೆ ಈ ನಿಟ್ಟಿನಲ್ಲಿ ತರಬೇತಿ ನೀಡುವಲ್ಲಿ ಈ ಒಡಂಬಡಿಕೆಯು ಉಪಯುಕ್ತವಾಗುವುದು ಎಂದು ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಹೇಳಿದ್ದಾರೆ.

ಈ ಒಡಂಬಡಿಕೆಯು ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನದ ಉನ್ನತೀಕರಣ ಮತ್ತು ಯೋಜನಾ ಕಾರ್ಯಕ್ಕೆ ಸಹಾಯಕವಾಗುವುದು ಎಂದು ವಿಭಾಗ ಮುಖ್ಯಸ್ಥ ಪ್ರೊ.ಅಲ್ಲಮಪ್ರಭು ಕೊಳಕಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಶಾಂತಲಾ ಪವರ್‌ನ ತರಬೇತಿ ವಿಭಾಗದ ವ್ಯವಸ್ಥಾಪಕ ವಿನೋದ್ ನಾರಾಯಣ ಉಪಸ್ಥಿತರಿದ್ದರು.

# ಹುಬ್ಬಳ್ಳಿಯ ಶಾಂತಲಾ ಪವರ್ ಜೊತೆ ಒಪ್ಪಂದ



**ಹಳಿಯಾಳ:** ಪಟ್ಟಣದ ಕೆ.ಎಲ್.ಎಸ್ ಸಂಸ್ಥೆಯ ವಿ.ಡಿ.ಐ.ಟಿ ಇಂಜಿನಿಯರಿಂಗ್ ಕಾಲೇಜಿನ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ವಿಭಾಗವು ಹುಬ್ಬಳ್ಳಿಯ ಶಾಂತಲಾ ಪವರ್ ಲಿಮಿಟೆಡ್ ಜೊತೆ ಒಡಂಬಡಿಕೆ ಮಾಡಿಕೊಂಡಿದೆ.

ಈ ಒಡಂಬಡಿಕೆಗೆ ಶಾಂತಲಾ ಪವರ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ ಡಾ.ಸುಮಂಗಲಾ ಕೆ ಮೈಸೂರ ಹಾಗೂ ವಿ.ಡಿ.ಐ.ಟಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಸಹಿ ಮಾಡಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯ ಡಾ. ವಿ.ಎ.ಕುಲಕರ್ಣಿ ಮಾತನಾಡಿದರು. ಕಾಲೇಜಿನ ವಿಭಾಗ ಮುಖ್ಯಸ್ಥ ಪ್ರೊ. ಅಲ್ಲಮಪ್ರಭು ಮಾತನಾಡಿದರು. ಶಾಂತಲಾ ಪವರ್‌ನ ತರಬೇತಿ ವಿಭಾಗದ ವ್ಯವಸ್ಥಾಪಕ ವಿನೋದ್ ನಾರಾಯಣ ಉಪಸ್ಥಿತರಿದ್ದರು.